ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: ಗೃಹ - CD ಪ್ರಕರಣ 8

ಪತ್ರಿಕೆಯ ಹೆಸರು : NAME OF THE NEWS PAPER: ಜನತಾವಾಣಿ ದಿನಾಂಕ : DATE : 5/4/21

# ಮಾಜಿ ಸಚಿವ ಡಿ.ಸುಧಾಕರ್, ಶಾಸಕರಿಗೂ ನೋಟಿಸ್?

**ಬೆಂಗಳೂರು:** ಸಿಡಿ ಪ್ರಕರಣದಲ್ಲಿ ಕೇಳಿಬಂದಿರುವ ಮಾಜಿ ಸಚಿವ ಡಿ.ಸುಧಾಕರ್ ಹಾಗೂ ಮಾಜಿ ಶಾಸಕರೊಬ್ಬರಿಗೆ ಎಸ್‌ಐಟಿ ಒಂದೆರಡು ದಿನಗಳಲ್ಲಿ ನೋಟಿಸ್ ಜಾರಿ ಮಾಡುವ ಸಾಧ್ಯತೆಗಳಿವೆ. ಮತ್ತೊಂದೆಡೆ ಮಾಜಿ ಸಚಿವ ಡಿ.ಸುಧಾಕರ್ ಮತ್ತು ಮಾಜಿ ಶಾಸಕರೊಬ್ಬರು ಹಾಗೂ ಪ್ರತಿಷ್ಠಿತ ಉದ್ಯಮಿಯೊಬ್ಬರು ಹಂತ-ಹಂತವಾಗಿ ಯುವತಿ ಖಾತೆಗೆ ಹಣ ಹಾಕಿದ್ದಾರೆ ಎನ್ನಲಾಗಿದೆ. ಈಗಾಗಲೇ ಶುಕ್ರವಾರ ಎಸ್‌ಐಟಿ ದೂರವಾಣಿ ಮೂಲಕ ಸಂಪರ್ಕಿಸಿ ಭೇಟಿಯಾಗುವ ಪ್ರಸ್ತಾಪ ಇಟ್ಟಿತ್ತು. ಆದರೆ, ಯಾವ ವಿಚಾರಕ್ಕೆ ಭೇಟಿ ಎಂಬುದು ಪ್ರಸ್ತಾಪಿಸಿರಲಿಲ್ಲ ಎಂದು ಸುಧಾಕರ್ ಅವರೇ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ರಮೇಶ್ ಜಾರಕಿಹೊಳಿ ಅವರ ಸಿಡಿ ಬಿಡುಗಡೆಗೂ ಮೊದಲು ಸುಧಾಕರ್ ಅವರು ಸಂತ್ರಸ್ತೆ ಜತೆ ದೂರವಾಣಿ ಸಂಪರ್ಕದಲ್ಲಿದ್ದರು ಎಂಬುದು ಸಂತ್ರಸ್ತೆ ಮೊಬೈಲ್ ಸಿಡಿಆರ್‌ನಲ್ಲಿ ಬೆಳಕಿಗೆ ಬಂದಿದೆ. ಅಲ್ಲದೆ, ಮೈಸೂರು ಭಾಗದ ಮಾಜಿ ಶಾಸಕರೊಬ್ಬರು, ಪ್ರತಿಷ್ಠಿತ ಉದ್ಯಮಿಯೊಬ್ಬರು ಆಕೆಗೆ ಫೋನ್ ಮಾಡಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಮಧ್ಯೆ ಈ ಮೂವರು ಯುವತಿ ಬೇಡಿಕೆಗೆ ತಕ್ಕಂತೆ ಆಕೆ ಖಾತೆಗೆ ಆಗಾಗ್ಗೆ ಆನ್‌ಲೈನ್ ಪಾವತಿ ವಿಧಾನಗಳ ಮೂಲಕ ಹಣ ಜಮೆ ಮಾಡಿರುವ ಸಾಕ್ಷ್ಯಗಳು ಎಸ್‌ಐಟಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಪ್ರಮುಖವಾಗಿ ಸಿಡಿ ಬಿಡುಗಡೆ ಕೆಲ ದಿನಗಳ ಮೊದಲು ಯುವತಿ ಖಾತೆಗೆ ಮಾಜಿ ಸಚಿವರು ಸಾವಿರಾರು ರೂ. ಜಮೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ನಿಟ್ಟಿನಲ್ಲಿ ಮಾಜಿ ಸಚಿವ ಸುಧಾಕರ್ ಸೇರಿ ಮೂವರನ್ನು ಸದ್ಯದಲ್ಲೇ ನೋಟಿಸ್ ಕೊಟ್ಟು ವಿಚಾರಣೆ ನಡೆಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.